

# ಉಳುವಾ ಯೋಗಿಯ ನೋಡಿಲ್ಲಿ...

ತಲೆಯ ಮೇಲೆ ಮುಟ್ಟಾಳೆ, ಹೆಗಲ ಮೇಲೆ ನೊಗ ಮತ್ತು ನೇಗಿಲು, ಉಟ್ಟ ಬಟ್ಟೆಯ ಮೇಲೆಲ್ಲಾ ಕೆಸರಿನ ಅಭಿಷೇಕ ಮಾಡಿಕೊಂಡು ಗಟ್ಟಿ ದನಿಯಲ್ಲಿ 'ಉರಲ್' ಹಾಡುತ್ತಾ ವ್ಯಕ್ತಿಯೊಬ್ಬ ಎದುರು ಬಂದು ನಿಂತ. ಅವರು 'ಅಣ್ಣಾ ನಮಸ್ಕಾರ' ಎಂದಾಕ್ಷಣ ನಾನು ಕಕ್ಕಾಬಿಕ್ಕಿಯಾದೆ. 'ನಿಮಗೆ ನನ್ನ ಗುರುತು ಸಿಗಲಿಲ್ಲವೇ? ನಾನು ಉಪ್ಪಿನಂಗಡಿ ಬಳಿಯ ಕಲ್ಲೇರಿಯ ಚಂದಪ್ಪ' ಎಂದಾಗ ನವರಾತ್ರಿಗೆ ವೇಷ ಮರೆಸಿಕೊಂಡು ಹಳ್ಳಿಯ ಮೂಲೆಯಿಂದ ಬಂದ ಆ ವ್ಯಕ್ತಿಯ ಗುರುತು ಸಿಕ್ಕಿತು. ಅವನ ಅಭಿಜಾತ ಪ್ರತಿಭೆಗೆ ಮಾರುಹೋದೆ.

—ವೇಣುಗೋಪಾಲ ಶರ್ಮಾ, ಗುರುವಾಯನಕೆರೆ



# ಅಪರೂಪದ ಮಹಿಷ

ಈಚೆಗೆ ಭಟ್ಕಳ ಸಮೀಪದ ಊರಲ್ಲಿನ ಸ್ನೇಹಿತೆಯ ಮನೆಗೆ ಹೋಗಿದ್ದೆ. ಹಾಗೆಯೇ ಆ ಊರಿನ ಗಣಪತಿ ದೇಗುಲಕ್ಕೂ ಹೋಗಿದ್ದೆ. ದೇವಾಲಯದ ಹೊರಭಾಗದಲ್ಲಿ ಅತೀ ಅಪರೂಪದ ಆಶ್ಚರ್ಯದ ಮುಖವೊಂದು ನನ್ನನ್ನು ಆಕರ್ಷಿತು. ಅಲ್ಲಿನವರನ್ನು ವಿಚಾರಿಸಿದಾಗ ಅದು ಮಿಗದ (ಕಾಡುಕೋಣನ) ಮುಖವಾಡವೆಂದರು. ಆ ಕಲಾಕೃತಿಗಿಟ್ಟಿದ್ದ ಕೋಡುಗಳು (ಕೊಂಬು) ಮಾತ್ರ ನೈಜ ಕಾಡುಕೋಣದ್ದವು. ಕೇಳಿ ಅಚ್ಚರಿಯಾಯಿತು. ಮುಖವಾಡವನ್ನು ಸಿಮೆಂಟಿನಿಂದ ನಿರ್ಮಿಸಸಿದ್ದಾರೆ. ಅದು ಸುಮಾರು ಎರಡು ತಲೆಮಾರುಗಳಿಂದ ಅಲ್ಲಿರುವುದು ವಿಶೇಷ!

—ಗೀತಾ ಎಸ್ ಭಟ್, ಶಿರಾಲಿ

